**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.</u>**

**<u>ಸಿ.ಸಿ.ನಂ.999/2021</u>**

**<u>ಪಿರ್ಯಾದಿ</u> : ಸಹ್ಯಾದ್ರಿ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ, ತರೀಕೆರೆ**

**-ವಿರುದ್ದ-**

**ಆರೋಪಿ/ತರುಃ ಚಿತ್ರ ಕೋಂ ಧರ್ಮ**

****

**<u>ಆ ರೋ ಪ ಣೆ</u>**

ಆರೋಪಿಯಾದ ನೀವು ನಿಮ್ಮ ಗಂಡನಾದ ಧರ್ಮ ಬಿನ್ ಚಡಿಯನ್ ಇವರನ್ನು ಪಿರ್ಯಾದಿ ಸಂಸ್ಥೆಗೆ ಕರೆದುಕೊಂಡು ಬಂದು ಪರಿಚಯಿಸಿ ಆರೋಪಿಯಾದ ನಿಮ್ಮ ಜಾಮೀನಿನ ಮೇಲೆ ದಿನಾಂಕ 02.01.2019 ರಂದು ರೂ.80,000/- ಸಾಲವನ್ನು ಕೊಡಿಸಿ, ಈ ಬಾಬ್ತು ಆರೋಪಿಯಾದ ನೀವು ಮತ್ತು ನಿಮ್ಮ ಗಂಡ ಪಿರ್ಯಾದುದಾರರ ಬ್ಯಾಂಕಿಗೆ ತತ್ಸಂಬಂಧಿ ದಾಖಲಾತಿಗಳನ್ನು ಬರೆದುಕೊಟ್ಟು ಸದರಿ ಸಾಲಕ್ಕೆ ಬಡ್ಡಿ ಕೊಡಲು ಒಪ್ಪಿಕೊಂಡಿದ್ದು, ನಂತರ ಆರೋಪಿಯಾದ ನೀವು ಮತ್ತು ನಿಮ್ಮ ಗಂಡನಾದ ಧರ್ಮ ರವರು ಕೆಲ ಮೊತ್ತವನ್ನು ಮರುಪಾವತಿ ಮಾಡಿದ್ದು, ನಂತರ ದಿನಾಂಕ 17.02.2021 ರ ದಿನಾಂಕಕ್ಕೆ ಪಿರ್ಯಾದಿ ಸಂಸ್ಥೆಗೆ ರೂ.1,16,000/- ಬಾಕಿ ಇದ್ದು, ಸದರಿ ಮೊತ್ತದ ಬಾಬ್ತು ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಗೆ ದಿನಾಂಕ 17.02.2021 ರ ಮುಂದಿನ ದಿನಾಂಕವನ್ನು ನಮೂದಿಸಿ ಕಾವೇರಿ ಗ್ರಾಮೀಣ ಬ್ಯಾಂಕ್, ತರೀಕೆರೆ ಶಾಖೆಗೆ ಸೇರಿದ ಚೆಕ್ ಸಂಖ್ಯೆ 04953 ನ್ನು ರೂ.1,16,000/- ಗಳಿಗೆ ನೀಡಿದ್ದು, ನಂತರ ಪಿರ್ಯಾದಿಯು ದಿನಾಂಕ 17.02.2021 ರಂದು ತನ್ನ ಖಾತೆ ಇರುವ ಕೆ.ಜಿ.ಬಿ. ಬ್ಯಾಂಕ್, ತರೀಕೆರೆ ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಚೆಕ್ಕು ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಮತ್ತು ನಿಮ್ಮ ಸಹಿ ವ್ಯತ್ಯಾಸವಿದೆ ಎಂಬ ಕಾರಣಕ್ಕಾಗಿ ಅಮಾನ್ಯಗೊಂಡು ದಿನಾಂಕ 20.02.2021 ರಂದು ಪಿರ್ಯಾದುದಾರರಿಗೆ ಈ ಬಾಬ್ತು ಕೆ.ಜಿ.ಬಿ. ಬ್ಯಾಂಕ್, ತರೀಕೆರೆ ಶಾಖೆಯವರು ಹಿಂಬರಹ ನೀಡಿದ್ದು, ಅನಂತರ ಪಿರ್ಯಾದಿಯು ಆರೋಪಿಯಾದ ನಿಮಗೆ ದಿನಾಂಕ 23.02.2021 ರಂದು ವಕೀಲರ

ಮೂಲಕ ನೋಟೀಸ್ ನೀಡಿದ್ದು, ಸದರಿ ನೋಟೀಸು ಆರೋಪಿಯಾದ ನಿಮಗೆ ದಿನಾಂಕ 25.02.2021 ರಂದು ಖುದ್ದು ಜಾರಿಯಾಗಿದ್ದು ಆನಂತರವೂ ಸಹ ಆರೋಪಿಯಾದ ನೀವು ಯಾವುದೇ ಹಣ ಹಿಂದಿರುಗಿಸಿರುವುದಿಲ್ಲ, ಆದ್ದರಿಂದ ಆರೋಪಿಯಾದ ನೀವು ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಕಾಯ್ದೆ ಕಲಂ 138 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ.

ಪ್ರಶ್ನೆ 1) ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರಾ?
ಉತ್ತರಃ- ಹೌದು

ಪ್ರಶ್ನೆ 2) ನೀವು ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ- ಸುಳ್ಳು , ವಿಚಾರಣೆಯಾಗಬೇಕು

ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿತರು ಕೊಟ್ಟ ಉತ್ತರವನ್ನು ನಾನೇ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.

ದಿನಾಂಕಃ 15.07.2023

**ಸಹಿ**
**(ಶಿವಕುಮಾರ್.ಆರ್)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದರ., ತರೀಕೆರೆ.**